# ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಅರ್ಜಿ ಆಹ್ವಾನ

ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರ ಹುದ್ದೆಗೆ ಹೊರಗುತ್ತಿಗೆ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

| ಕ್ರ. ಸಂ | ಹುದ್ದೆ | ಹುದ್ದೆಗಳ ಸಂಖ್ಯೆ | ಸಕಲಾ ಮಿಷನ್‌ನಿಂದ ನೀಡುವ ವೇತನ (take home +Employee PF+ Employer PF Contribution +Professional Tax ) ರೂ.ಗಳಲ್ಲಿ | ವಿದ್ಯಾರ್ಹತೆ | ಕನಿಷ್ಠ ಒಟ್ಟಾರೆ ಅನುಭವ |
|---|---|---|---|---|---|
| 1 | ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರು | 01 | 27,100 (23,150+1800-1950+200) | B.Eof B.Tech/BCA Stream; Computer Scince or Information Scince Enginnering Electronic and Communication Telecom | Fresher (Weightage will be given to experience) |

1. ಮಾಹಿತಿ ತಂತ್ರಜ್ಞಾನದಲ್ಲಿ ಕನಿಷ್ಠ 03 ರಿಂದ 05 ವರ್ಷ ಅನುಭವ ಹೊಂದಿರಬೇಕು ಅಂತಹ ಆಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.
2. ಆಂಗ್ಲ ಮತ್ತು ಕನ್ನಡ ಭಾಷೆಯ ಮೇಲೆ ಹಿಡಿತ ಹೊಂದಿರಬೇಕು ಎಂ.ಎಸ್ ಆಪೀಸ್‌ನಲ್ಲಿ ಕಾರ್ಯ ನಿರ್ವಹಿಸುವ ಜ್ಞಾನ ಹೊಂದಿರಬೇಕು.
3. ಆಸಕ್ತಿ ಉಳ್ಳವರು ದಿನಾಂಕ:09-04-2025 ರೊಳಗೆ ನೊಂದಣಿ ಅಂಚೆಯ ಮೂಲಕ ತಮ್ಮ ಸ್ವವಿವರದೊಂದಿಗೆ (ಪದವಿ ಪ್ರಮಾಣ ಪತ್ರ, ಅನುಭವ ಪ್ರಮಾಣ ಪತ್ರ ಹಾಗೂ ಇನ್ನಿತರ ದಾಖಲಾತಿಗಳನ್ನು) ಸ್ವಯಂ ಪ್ರಮಾಣಿಸಿ ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿಗೆ ಕಳುಹಿಸತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ: ಮೊಬೈಲ್ ಸಂಖ್ಯೆ: 7899085564 ಹಾಗೂ deo.bangalorer3@gmail.com

ಅಪರ ಜಿಲ್ಲಾಧಿಕಾರಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ

# <u>ಕರ್ನಾಟಕ ಸರ್ಕಾರ</u>

ಸಂಖ್ಯೆ: ಸಿಆಸುಇ 3 ಎಸ್‌ಪಿಎಂ 2025

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:07.02.2025.

**ಇವರಿಂದ,**
ಅಪರ ಮಿಷನ್ ನಿರ್ದೇಶಕರು-1
ಸಕಾಲ ಮಿಷನ್,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
ಇಲಾಖೆ(ಇ-ಆಡಳಿತ),
ಬಹುಮಹಡಿ ಕಟ್ಟಡ,
ಬೆಂಗಳೂರು-01.

**ಇವರಿಗೆ,**
ಜಿಲ್ಲಾಧಿಕಾರಿಗಳು,
ಎಲ್ಲಾ ಜಿಲ್ಲೆಗಳು.

**ಮಾನ್ಯರೇ,**

**ವಿಷಯ:** ಸಕಾಲ ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಕುರಿತು.

**ಉಲ್ಲೇಖ:**
1. ಈ ಕಛೇರಿಯ ಪತ್ರ ಸಂಖ್ಯೆ: ಸಿಆಸುಇ 78 ಇಕಾಅ 2012 ದಿನಾಂಕ:26.03.2012.
2. ಈ ಕಛೇರಿಯ ಪತ್ರ ಸಂಖ್ಯೆ: ಸಿಆಸುಇ 186 ಇಕಾಅ 2017 ದಿನಾಂಕ:15.11.2017.
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 3 ಎಸ್‌ಪಿಎಂ 2024, ದಿನಾಂಕ:03.05.2024
4. ಈ ಕಛೇರಿಯ ತಿದ್ದುಪಡಿ ಆದೇಶ ಸಂಖ್ಯೆ: ಸಿಆಸುಇ 4 ಎಸ್‌ಪಿಎಂ 2024, ದಿನಾಂಕ:18.10.2024

*****

ಉಲ್ಲೇಖ (1)ರ ಈ ಕಛೇರಿಯ ಪತ್ರದಲ್ಲಿ, ಕರ್ನಾಟಕ ನಾಗರೀಕ ಸೇವೆಗಳ ಖಾತರಿ ವಿಧೇಯಕ 2011 ರ ಪರಿಣಾಮಕಾರಿ ಅನುಷ್ಠಾನದ ಸಂಬಂಧ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳಿಗೆ ಸಹಕರಿಸಲು IT ಸಮಾಲೋಚಕರುಗಳನ್ನು ನೇಮಿಸಿಕೊಳ್ಳುವಂತೆ ಸೂಚಿಸಲಾಗಿತ್ತು. ತದನಂತರದಲ್ಲಿ ಉಲ್ಲೇಖ (2) ರ ಈ ಕಛೇರಿಯ ಪತ್ರದಲ್ಲಿ ಸಕಾಲ ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರ, ಹುದ್ದೆಗಳಿಗೆ ಸೂಕ್ತ ಅಭ್ಯರ್ಥಿಗಳನ್ನು ಸಕಾಲ ಮಿಷನ್ ಕೇಂದ್ರ ಕಛೇರಿಯಿಂದಲೇ ನೇಮಿಸಿ ಜಿಲ್ಲೆಗಳಿಗೆ ನಿಯೋಜಿಸಲಾಗುವುದೆಂದು ತಿಳಿಸಲಾಗಿರುತ್ತದೆ.

ಉಲ್ಲೇಖ (3) ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011 ಮತ್ತು (ತಿದ್ದುಪಡಿ) ಅಧಿನಿಯಮ 2014 ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಮಂಜೂರಾಗಿರುವ 54 ಹುದ್ದೆಗಳಲ್ಲಿ 6 ಸರ್ಕಾರಿ ಹುದ್ದೆಗಳನ್ನು ಮತ್ತು 48 ಗುತ್ತಿಗೆ/ಹೊರಗುತ್ತಿಗೆ (ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರನ್ನು ಒಳಗೊಂಡಂತೆ) ಹುದ್ದೆಗಳನ್ನು 01 ವರ್ಷದ ಅವಧಿಗೆ ಮುಂದುವರೆಸಿ ಆದೇಶಿಸಲಾಗಿರುತ್ತದೆ.

ಈ ಕಛೇರಿಯ ಕಡತ ಸಂಖ್ಯೆ:ಸಿಆಸುಇ 1 ಎಸ್‌ಪಿಎಂ 2025 ರಲ್ಲಿ ಅನುಮೋದನೆಯಾಗಿರುವಂತೆ ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರ ಹುದ್ದೆಗೆ ಈ ಕೆಳಕಂಡ ವಿದ್ಯಾರ್ಹತೆ ಮತ್ತು ಕಾರ್ಯ ಅನುಭವವನ್ನು ನಿಗದಿ ಪಡಿಸಲಾಗಿದೆ.

| ಕ್ರ.ಸಂ. | ಹುದ್ದೆ | ಹುದ್ದೆಗಳ ಸಂಖ್ಯೆ | ಸಕಾಲ ಮಿಷನ್‌ನಿಂದ ನೀಡುವ ವೇತನ (take home+Employee PF+ Employer PF Contribution +Professional Tax) ರೂ.ಗಳಲ್ಲಿ | ವಿದ್ಯಾರ್ಹತೆ | ಕನಿಷ್ಠ ಒಟ್ಟಾರೆ ಅನುಭವ |
|---|---|---|---|---|---|
| 1 | ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರು | 32 | 27,100 (23,150+1,800+1,950+200) | B.E or B.Tech/BCA Stream: Computer Science or Information Science Enginnering Electronic and Communication Telecom | Fresher (Weightage will be given to experience) |

ಜಿಲ್ಲೆಗಳಲ್ಲಿ ಖಾಲಿ ಇರುವ ಸಕಾಲ ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರ ಹುದ್ದೆಗಳ ಭರ್ತಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಸಕಾಲ ಮಿಷನ್ ಕೇಂದ್ರ ಕಛೇರಿಯಲ್ಲಿ ಸಂದರ್ಶನ/ಪ್ರಕ್ರಿಯೆಗಳನ್ನು ಕೈಗೊಂಡಿದ್ದು, ಸದರಿ Process ನಲ್ಲಿ ಈ ಕೆಳಗಿನ ತೊಂದರೆಗಳು ಕಂಡುಬಂದಿರುತ್ತವೆ.

1. ಸಂದರ್ಶನಕ್ಕೆ ಹಾಜರಾಗಿದ್ದ ಅಭ್ಯರ್ಥಿಗಳಲ್ಲಿ ಎಲ್ಲಾ ಜಿಲ್ಲೆಗಳಿಂದ ಗಣನೀಯ ಸಂಖ್ಯೆಯಲ್ಲಿ Resume ಗಳು ಸ್ವೀಕೃತವಾಗದೇ ಒಂದೇ ಜಿಲ್ಲೆಯಿಂದ ಹೆಚ್ಚಿನ ಅಭ್ಯರ್ಥಿಗಳ Resume ಸ್ವೀಕೃತಗೊಂಡಿರುತ್ತದೆ. ಇದರಿಂದ ಜಿಲ್ಲಾವಾರು ಪ್ರಾತಿನಿಧ್ಯಕ್ಕೆ ಅರ್ಹ ಅಭ್ಯರ್ಥಿಗಳು ಲಭ್ಯವಾಗದ ಪ್ರಯುಕ್ತ Merit ಆಧಾರದ ಮೇಲೆ ಆಯ್ಕೆಗೊಂಡ ಅಭ್ಯರ್ಥಿಗಳು ಈ ಹುದ್ದೆಗೆ ನಿಗದಿಪಡಿಸಿರುವ ಪರಿಶ್ರಮ ಧನವು ಕಡಿಮೆ ಇರುವುದರಿಂದ ಸ್ವಂತ ಜಿಲ್ಲೆಯನ್ನು ಹೊರತುಪಡಿಸಿ ಇತರೆ ಬೇರೆ ಯಾವುದೇ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸಲು ಸಹಮತಿ ವ್ಯಕ್ತಪಡಿಸಿರುವುದಿಲ್ಲ.

2. ಒಂದು ವೇಳೆ ಆಯ್ಕೆಯಾದ ಅಭ್ಯರ್ಥಿಗಳು ಅವರ ಸ್ವಂತ ಜಿಲ್ಲೆ ಅಲ್ಲದೇ Merit list ನಲ್ಲಿ ಅವರ Order ಮೇಲೆ Allot ಆದ ಇತರೆ ಜಿಲ್ಲೆಗಳಲ್ಲಿ ಹಾಜರಾದರೂ ಸಹ ಅತಿ ಕಡಿಮೆ ಸಮಯದಲ್ಲಿ ಹುದ್ದೆಯನ್ನು ತ್ಯಜಿಸುವ ಸಾಧ್ಯತೆ ಹೆಚ್ಚಿದ್ದು, ಇದರಿಂದ ಆಗಿಂದಾಗ್ಗೆ ಮತ್ತೆ ಮತ್ತೆ ಜಿಲ್ಲೆಗಳಲ್ಲಿ ಹುದ್ದೆಗಳು ಖಾಲಿಯಾಗುವ ಸಾಧ್ಯತೆ ಇರುತ್ತದೆ

3. ಜಿಲ್ಲೆಗಳಲ್ಲಿ ಆಗಿಂದಾಗ್ಗೆ ಖಾಲಿಯಾದ ಹುದ್ದೆಗಳಿಗೆ ಪದೇ ಪದೇ ಪುನಃ ಅಭ್ಯರ್ಥಿಗಳ ಆಯ್ಕೆಗೆ ಸಂದರ್ಶನ ಪ್ರಕ್ರಿಯೆಯನ್ನು ಕೇಂದ್ರ ಕಛೇರಿಯಲ್ಲಿ ನಿರ್ವಹಿಸಿದ್ದಲ್ಲಿ ಆಯ್ಕೆ ಪ್ರಕ್ರಿಯೆಯೂ ವಿಳಂಬವಾಗಿ, ಜಿಲ್ಲೆಗಳಲ್ಲಿ ಸಕಾಲ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನವು ಕುಂಠಿತಗೊಳ್ಳುವ ಸಾಧ್ಯತೆ ಹೆಚ್ಚಿರುತ್ತದೆ

4. ಅಲ್ಲದೇ ಆಗಿಂದಾಗ್ಗೆ ತೆರವುಗೊಳ್ಳುವ DITC ಹುದ್ದೆಗಳ ಆಯ್ಕೆಯ ಪ್ರಕ್ರಿಯೆಗೆ ಸಂದರ್ಶನಕ್ಕೆ ಆಯ್ಕೆ ಸಮಿತಿಯ ಸದಸ್ಯರನ್ನು ಆಹ್ವಾನಿಸಬೇಕಾದ ಅನಿವಾರ್ಯತೆ ಇದ್ದು, ಕೆಲವೊಂದು ಬಾರಿ ಸಮಿತಿಯ ಸದಸ್ಯರುಗಳು ಇನ್ನಿತರೆ ಕಛೇರಿಯ ಕೆಲಸದ ನಿಮಿತ್ತ ಸಂದರ್ಶನಕ್ಕೆ ಹಾಜರಾಗದಿರುವ ಸಾಧ್ಯತೆ ಹೆಚ್ಚಾಗಿರುತ್ತದೆ ಇದರಿಂದ ಸಂದರ್ಶನದ ಸಮಯವನ್ನು ಮುಂದೂಡಬೇಕಾಗುತ್ತದೆ ಮತ್ತು ಪುನಃ ಹೆಚ್ಚಿನ ವಿಳಂಬಕ್ಕೆ ಕಾರಣವಾಗುತ್ತದೆ

5. ಇದಲ್ಲದೇ ಸಂದರ್ಶನದಲ್ಲಿ ಭಾಗವಹಿಸಿದ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ Online ಮೂಲಕ ಸಂದರ್ಶನವನ್ನು ಕೈಗೊಂಡಿರುತ್ತಾರೆ. Due to Low Remuneration candidates could not afford transport

cost and are not coming for physical interviews and Sakala Mission is forced to conduct online Interview and it is difficult to gauge candidate's actual talent through Online Interview due to poor signal etc., Problems for remotely placed candidates

ಮೇಲೆ ತಿಳಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸಂಬಂಧಪಟ್ಟ ಜಿಲ್ಲೆಗಳಲ್ಲಿ ಖಾಲಿ ಇರುವ/ಖಾಲಿಯಾಗುವ ಸಕಾಲ ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಅಧಿಕಾರವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ನೀಡಿದ್ದಲ್ಲಿ ಆಯಾ ಜಿಲ್ಲೆಯ ಅಭ್ಯರ್ಥಿಗಳನ್ನೇ ಆಯ್ಕೆ ಮಾಡಲು ಸಹಕಾರಿಯಾಗುವುದಲ್ಲದೇ, ವಿಳಂಬಕ್ಕೆ ಆಸ್ಪದ ನೀಡದಂತೆ ತುರ್ತಾಗಿ ಖಾಲಿಯಾದ ಹುದ್ದೆಗೆ ಸ್ವಹೀಯವಾಗಿ ಸಂದರ್ಶನವನ್ನು ಕೈಗೊಳ್ಳುವುದರಿಂದ DITC ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡಬಹುದಾಗಿದೆ. ಇದರಿಂದ ಜಿಲ್ಲೆಗಳಲ್ಲಿ ಸಕಾಲ ಕಾರ್ಯ್ಯವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅನುಕೂಲವಾಗುತ್ತದೆ.

ಆದ್ದರಿಂದ, **ಜಿಲ್ಲೆಗಳಲ್ಲಿ ಸಕಾಲ ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಸಂದರ್ಶನದ ಮೂಲಕ ಆಯ್ಕೆ ಮಾಡಲು ಜಿಲ್ಲಾ ಮಟ್ಟದಲ್ಲಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಆಯ್ಕೆ ಸಮಿತಿಯನ್ನು ರಚಿಸಿ, ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡಲು ತೀರ್ಮಾನಿಸಲಾಗಿದೆ**.

**DITC, ಸಕಾಲ ಹುದ್ದೆಗೆ ಜಿಲ್ಲಾ ಮಟ್ಟದಲ್ಲಿ ಆಯ್ಕೆ ಸಮಿತಿ**

| | | |
|---|---|---|
| **1** | ಅಪರ ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| **2** | ಜಿಲ್ಲಾ NIC ತಂಡದ ಪ್ರತಿನಿಧಿ | ಸದಸ್ಯರು |
| **3** | ಜಿಲ್ಲಾಧಿಕಾರಿಗಳು ಇಚ್ಛಿಸುವ ಇತರ ತಾಂತ್ರಿಕ/ತಾಂತ್ರಿಕೇತರ ಅಧಿಕಾರಿಗಳು | ಸದಸ್ಯರು |
| **4** | ಕೇಂದ್ರ ಸ್ಥಾನದ ತಹಶೀಲ್ದಾರ್/ ಕಛೇರಿ ಸಹಾಯಕ ತಹಶೀಲ್ದಾರ್ (Head Quarters Tahsildar/ Office Assistant Tahsildar | ಸದಸ್ಯ - ಕಾರ್ಯದರ್ಶಿ |

ಅದರಂತೆ, ಜಿಲ್ಲೆಗಳಲ್ಲಿ ಖಾಲಿ ಇರುವ ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಆಯ್ಕೆ ಪ್ರಕ್ರಿಯೆಯನ್ನು ತುರ್ತಾಗಿ ಪ್ರಾರಂಭಿಸಿ, ಆಯ್ಕೆ ಸಮಿತಿಯ ಮೂಲಕ ಆಯ್ಕೆಯಾದ ಅಭ್ಯರ್ಥಿಯ ವಿದ್ಯಾರ್ಹತೆಯನ್ನು DG locker ಇತ್ಯಾದಿಗಳ ಮೂಲಕ ಮತ್ತು ಕಾರ್ಯಾನುಭವವನ್ನು Claim ಮಾಡುತ್ತಿರುವ ಸಂಸ್ಥೆಯೊಂದಿಗೆ ಪರಿಶೀಲಿಸಿ ದೃಢಪಡಿಸಿಕೊಂಡು (Cross Checking and Confirming with the firm from where experience is being claimed) ದಾಖಲಾತಿಗಳ ನೈಜತೆಯನ್ನು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಪರಿಶೀಲಿಸಿ ದೃಢಪಡಿಸಿಕೊಂಡಿರುವ ಬಗ್ಗೆ ದೃಢೀಕರಣ ಪತ್ರದೊಂದಿಗೆ (**ಪ್ರತಿ ಲಗತ್ತಿಸಿದೆ**) ಅಭ್ಯರ್ಥಿಯ ಹೆಸರನ್ನು ಸಕಾಲ ಮಿಷನ್‌ಗೆ ಶಿಫಾರಸ್ಸು ಮಾಡುವಂತೆ ತಮ್ಮನ್ನು ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

(**ನಿವೇದಿತ. ಎಸ್**)
ಆಡಳಿತಾಧಿಕಾರಿ (ಪ್ರ)
ಸಕಾಲ ಮಿಷನ್
ಸಿಬ್ಬಂದಿ ಮತ್ತು ಆಡಳಿತ
ಸುಧಾರಣೆಇಲಾಖೆ (ಇ-ಆಡಳಿತ)

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ/3/ಎಸ್‌ಪಿಎಂ/2025

ಜಿಲ್ಲಾಧಿಕಾರಿಗಳ ಕಛೇರಿ,
___________ ಜಿಲ್ಲೆ,
ದಿನಾಂಕ: __________

**ದೃಢೀಕರಣ ಪತ್ರ**

ಶ್ರೀ/ಶ್ರೀಮತಿ_____________ಬಿನ್/ಕೋಂ_________________ಇವರು___________ ಜಿಲ್ಲೆಯಲ್ಲಿ ಖಾಲಿ ಇರುವ ಸಕಾಲ ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರ ಹುದ್ದೆಗೆ ದಿನಾಂಕ: __________ರಂದು ನಡೆಸಲಾದ ಆಯ್ಕೆ ಸಮಿತಿಯ ಸಂದರ್ಶನದ ಮೂಲಕ ಆಯ್ಕೆಯಾಗಿದ್ದು, ಸದರಿಯವರು ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಮತ್ತು ಕಾರ್ಯಾನುಭವವನ್ನು ಹೊಂದಿರುತ್ತಾರೆ.

ಸದರಿಯವರು ವಿದ್ಯಾರ್ಹತೆ ಮತ್ತು ಕಾರ್ಯಾನುಭವಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುವ ದಾಖಲಾತಿಗಳ ನೈಜತೆಯ ಕುರಿತು ಪರಿಶೀಲನೆಗೆ ಒಳಪಡಿಸಿದ್ದು, ಪರಿಶೀಲನೆಯಿಂದ ಸದರಿ ದಾಖಲಾತಿಗಳು ನೈಜತೆಯಿಂದ ಕೂಡಿರುವುದು ಕಂಡುಬಂದಿರುತ್ತದೆ.

ಆದ್ದರಿಂದ ಸದರಿಯವರನ್ನು ಜಿಲ್ಲೆಯ ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರು, ಸಕಾಲ ಮಿಷನ್ ಹುದ್ದೆಗೆ ಪರಿಗಣಿಸಬಹುದಾಗಿರುತ್ತದೆ.

ಜಿಲ್ಲಾಧಿಕಾರಿಗಳು,
___________ಜಿಲ್ಲೆ.